## 11

# ಕ್ರಿಸ್ತನ ವಧು

*"... ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ" (2 ಕೊರಿಂಥ 11:2).*

ಹಾರ್ಡಿಂಗ್ ಯುನಿವರ್ಸಿಟಿಯ ಮಹಿಳಾ ವಿದ್ಯಾರ್ಥಿನಿಯರಲ್ಲಿ ಕೆಲವರು, "ದೇವರು ಮೊದಲು ಪುರಷನನ್ನು ಯಾಕೆ ಉಂಟುಮಾಡಿದನೆಂದು ನಿಮಗೆ ಗೊತ್ತೋ? ಆತನು ತನ್ನ ಮೇರು ಕೃತಿಯನ್ನು ಮಾಡುವ ಮೊದಲು ಒರಟಾದ ಕರಡು ಪ್ರತಿಯನ್ನು ಮಾಡಲು ಬಯಸಿದನು!" ಎಂದು ಹಾಸ್ಯದಿಂದ ಹೇಳಿದರು. ಎಲ್ಲಾ ತಮಾಷೆಯನ್ನು ಬದಿಗಿಟ್ಟು, ಮಹಿಳೆಯು, ದೇವರ ನಕ್ಷೆಯ ಪ್ರಕಾರ, ಸುಂದರವಾದ ಜೀವಿಯಾಗಿದ್ದಾಳೆ - ದೇವರ ಇಡೀ ಅತ್ಯಂತ ಸುಂದರವಾದ ಜೀವಿಯಾಗಿದ್ದಾಳೆ.

ಒಬ್ಬ ಮಹಿಳೆಯು ತನ್ನ ಮದುವೆಯ ದಿನದಂದಿಗಿಂತ ಹೆಚ್ಚು ಸುಂದರವಾಗಿ ಎಂದೂ ಇರುವದಿಲ್ಲ. ತಮ್ಮ ಮದುವೆಯ ಸಂದರ್ಭದಲ್ಲಿ ತನ್ನ ಹೃದಯವನ್ನೂ ಜೀವಿತ ವನ್ನೂ ಒಪ್ಪಿಸಲು ಬರುವಾಗ ಅವನ ವಧುವಿನ ಹೊಳೆಯುವ ಸೌಂದರ್ಯವನ್ನು ಯಾವ ಪತಿಯು ಮರೆಯುವನು? ಆ ಸಮಯದಲ್ಲಿಯ ಆಕೆಯ ಪ್ರೀತಿಯು ವೃದ್ಧಾ ಪ್ಯದಲ್ಲಿ ಅವನ ಸ್ಮರಣೆಗೆ ಮುಸುಕು ಬೀಳುವವರೆಗೆ ಇಲ್ಲವೇ ಅವನಿಗೆ ಮರಣ ಬರುವವರೆಗೆ ಅವನ ಮನಸ್ಸಿನಲ್ಲಿ ಅಚ್ಚೊತ್ತಿದಂತಿರುವುದು.

"ವಧು" ಎಂಬ ಪದವು ಮಾಡುವಂತೆ ಸಭೆಯ ಬಗ್ಗೆ ಬೇರೆ ಯಾವುದೇ ರೂಪಕವು ನಮ್ಮ ಮನಸ್ಸುಗಳಿಂದ ಅಂಥ ಆಕರ್ಷಣೆಯನ್ನೂ ಭಾವನೆಯನ್ನೂ ಹೊರಸೂಸುವ ಸಾಧ್ಯತೆಯಿರುವದಿಲ್ಲ. ಸಭೆಗಾಗಿರುವ ಹೊಸ ಒಡಂಬಡಿಕೆಯ ಎಲ್ಲಾ ರೂಪಕಗಳಲ್ಲಿ ಅದು ಅತೀ ಹೆಚ್ಚು ಸ್ವರೂಪ ದರ್ಶಕವಾದದ್ದಾಗಿರುವುದು.

ಈ ಪದವು ಸಭೆಯ ವಿವರಣೆಯಾಗಿ ಯೋಹಾನನಿಂದ ಮಾತ್ರವೇ ಉಪಯೋಗಿ ಸಲ್ಪಟ್ಟಿದೆ. ಅವನು ಈ ಪದವನ್ನು ಉಪಯೋಗಿಸುವದರಲ್ಲಿ ಸಭೆಯ ಭೂಲೋಕದ ಮತ್ತು ಪರಲೋಕದ ಸ್ಥಿತಿಗಳನ್ನು ಸಮ್ಮಿಶ್ರ ಮಾಡಿದ್ದಾನೆ (ಪ್ರಕಟನೆ 21:2, 9; 22:17). ಹೀಗಿದ್ದರೂ, ಪೌಲನು 2 ಕೊರಿಂಥ 11:2ರಲ್ಲಿ ಮಾಡಿದಂತೆ, ಯೇಸುವು ಮಾರ್ಕ 2:19ರಲ್ಲಿ ಯೇಸುವು ಸಭೆಯನ್ನು ಅಪ್ರತ್ಯಕ್ಷವಾಗಿ ವಧುವಿಗೆ ಹೋಲಿಸಿ ಹೇಳಿದನು. ಅಂಥ ಅಪ್ರತ್ಯಕ್ಷವಾದ ಹೇಳಿಕೆಗಳು ಎಫೆಸ 5:22-33ರಲ್ಲಿ ಪೌಲನ ಹೋಲಿಕೆಯನ್ನು ಮತ್ತು ರೋಮಾಪುರ 7:1-4ರಲ್ಲಿ ಅವನ ಹೋಲಿಕೆಯನ್ನು ಒಳಗೊಂಡಿರುತ್ತವೆ.

ಸಭೆಯನ್ನು ಕ್ರಿಸ್ತನ ವಧುವಿನಂತೆ ಯೋಚಿಸುವುದು ಸಭೆಯ ಸ್ವಭಾವ ಮತ್ತು ಗುಣದ ಇನ್ನೊಂದು ದೃಷ್ಟಿಕೋನಕ್ಕೆ ನಮ್ಮನ್ನು ತರುತ್ತದೆ. ಸಭೆಯು ಏನಾಗಿರ ಬೇಕೆಂದು ಉದ್ದೇಶಿಸಲ್ಪಟ್ಟಿತೆಂಬುದರ ಸಂಪೂರ್ಣ ತಿಳಿಯುವಿಕೆಗಾಗಿ, ಅದನ್ನು ವಿವರಿಸಲು ಪರಿಶುದ್ಧಾತ್ಮನು ಉಪಯೋಗಿಸಿದ ಎಲ್ಲಾ ಪದಗಳನ್ನೂ, ಸಾಮ್ಯಗಳನ್ನೂ, ರೂಪಕಗ

ಳನ್ನೂ ನಾವು ತೂಗಿನೋಡತಕ್ಕದ್ದು.

ಸಭೆಗೆ ಅನ್ವಯಿಸುವಾಗ ವಧುವಿನ ರೂಪಕವು ಏನನ್ನು ಸೂಚಿಸುತ್ತದೆ?

## ಪ್ರಶ್ನಾತೀತವಾದ ನಿಷ್ಠೆ

ಮೊದಲನೆಯದು, "ವಧು" ಎಂಬ ಮಾತು ನಂಬಿಗಸ್ತಿಕೆಯನ್ನು ತಿಳಿಸುತ್ತದೆ. ಮದುಮಗಳು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾಳೆ; ಪ್ರೀತಿ, ನಿಷ್ಠೆ ಮತ್ತು ಜೀವಿತವು ಅಗತ್ಯವಾಗಿರುವ ಒಂದು ಒಡಂಬಡಿಕೆಯಲ್ಲಿ ಆಕೆ ಪ್ರವೇಶಿಸಿದ್ದಾಳೆ.

ಕೊರಿಂಥದವರು ನಿಜವಾದ ಕ್ರಿಸ್ತನಿಂದ ಸುಳ್ಳು ಯೇಸುವಿನ ಕಡೆಗೆ ಮತ್ತು ಸುಳ್ಳು ಸುವಾರ್ತೆಯ ಕಡೆಗೆ ತಿರುಗುತ್ತಿರುವರೆಂದು ಪೌಲನು ಭಯಪಟ್ಟನು. ಅದರ ಪರಿಣಾಮವಾಗಿ, ಅವನು ಕೊರಿಂಥದವರನ್ನು ದೃಢವಾಗಿರುವದಕ್ಕೆ ಮತ್ತು ಶುದ್ಧತೆಯಲ್ಲಿರುವಂತೆ ಒತ್ತಾಯಿಸಲು ಸಾಧ್ಯವಾದಷ್ಟು ಹೆಚ್ಚು ಬಲವಾದ ಭಾಷೆಯನ್ನು ಉಪಯೋಗಿಸಿದನು: "ಯಾಕಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ" (2 ಕೊರಿಂಥ 11:2). ವಧುವಿಗೆ ತನ್ನ ಗಂಡನನ್ನು ಅಲ್ಲಗಳೆಯುವದನ್ನು ಯೋಚಿಸುವುದು ಅಸಾಧ್ಯವಾದದ್ದಾಗಿದೆ, ಆದುದರಿಂದ ವಿವಾಹ ನಿಶ್ಚಯದ ಸಂಬಂಧವನ್ನು ಕ್ರಿಸ್ತನ ಕಡೆಗಿರುವ ಕ್ರೈಸ್ತನ ನಿಷ್ಠೆಯನ್ನು ಉದಾಹರಿಸಲು ಪೌಲನು ಉಪಯೋಗಿಸಿದನು.

ಗಂಡ ಮತ್ತು ಹೆಂಡತಿಯರ ನಿಷ್ಠೆಯನ್ನು ಸೂಚಿಸುವದಕ್ಕಿಂತ ಹೆಚ್ಚು ನಿಷ್ಠೆಯ ಉದಾಹರಣೆಯು ಯಾವುದು ಇರುವುದು? ನಮ್ಮಲ್ಲಿ ಹೆಚ್ಚಾದವರು, ಒಬ್ಬರನ್ನೊಬ್ಬರು ಬೇರ್ಪಡಿಸಿಕೊಳ್ಳುವದಕ್ಕಿಂತ ಹೆಚ್ಚಾಗಿ ಒಂದಾಗಿ ಮರಣವನ್ನು ಎದುರಿಸುವದನ್ನು ಆಯ್ಕೆ ಮಾಡಿಕೊಳ್ಳುವ ಗಂಡ - ಹೆಂಡತಿಯರ ಬಗ್ಗೆ ಕೇಳಿದ್ದೇವೆ. ಒಬ್ಬರ ಕಡೆಗೆ ಇನ್ನೊಬ್ಬರಿಗೆ ತಮ್ಮ ಹೃದಯಗಳಲ್ಲಿರುವ ಭಕ್ತಿಯು ಜೀವಕ್ಕಿಂತ ಹೆಚ್ಚಾಗಿತ್ತು.

ಸಭೆಯ ಒಂದೇ ಒಂದು ಕರ್ತವ್ಯವು ಕ್ರಿಸ್ತನಿಗೆ ನಂಬಿಗಸ್ತಿಕೆಯಿಂದಿರುವುದು. ಆತನ ಜನರು ಜಯಿಸಲಿ, ಅಭಿವೃದ್ಧಿಗೊಳ್ಳಲು, ಇಲ್ಲವೇ ಜೀವಿಸಲೂ ಸಹ ಬೇಕಾಗಿರುವದಿಲ್ಲ, - ಅವರು ಕ್ರಿಸ್ತನಿಗೆ ನಿಜವಾಗಿರುವವರು ಮಾತ್ರವೇ ಆಗಿರಬೇಕು (ಪ್ರಕಟನೆ 2:10). ಇತರ ಯಾವುದೇ ಸಂಬಂಧಕ್ಕೆ (ಲೂಕ 14:26), ಸ್ವಾಸ್ಥ್ಯಕ್ಕೆ (ಲೂಕ 14:33), ಇಲ್ಲವೇ ನಿಷ್ಠೆಗೆ ಬೆಲೆ ಕೊಡುವದಕ್ಕಿಂತ ಹೆಚ್ಚಾಗಿ ಆತನಿಗೆ ನಮ್ಮ ಸಮರ್ಪಣೆಗೆ ಬೆಲೆ ಕೊಡತಕ್ಕದ್ದು (ಲೂಕ 14:27).

## ಅದ್ವಿತೀಯ ಅನನ್ಯತೆ

ಎರಡನೆಯದು, ಸಭೆಯು ಕ್ರಿಸ್ತನ ವಧುವಾಗಿರುವ ವಿಚಾರವು ಗುರುತಿಸುವಿಕೆಯನ್ನು ಅನ್ವಯಿಸುವುದು. ನಮ್ಮ ಪ್ರೀತಿಗಳನ್ನು ಒಂದು ಪ್ರೀತಿಯಾಗಿ ಮಾಡಿದ ಜನರ ಒಂದು ಗುಂಪು ನಾವಾಗಿರುವೆವು, ಮತ್ತು ಮನಸ್ಸಿನ ಈ ಒಂದಾಗುವಿಕೆಯಿಂದ ಕ್ರಿಸ್ತನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿರುವೆವು. ಹೀಗಿರುವದರಿಂದ, ನಾವು ಕ್ರಿಸ್ತನಿಗೆ ಒಳಪಟ್ಟವರಾಗಿರುವೆವು, ಮತ್ತು ಕ್ರಿಸ್ತನು ನಮಗೆ ಒಳಪಟ್ಟವನಾಗಿರುವನು. ಇದು ಗಂಡ, ಹೆಂಡತಿ ಪರಸ್ಪರ ಒಳಗೊಂಡಿರುವಂತೆ ಇರುವುದು. ಕ್ರಿಸ್ತನನ್ನು ನಮ್ಮ ಶಿರಸ್ಸಿನಂತೆ ನೋಡುವೆವು ಮತ್ತು ಆತನ ಹೆಸರನ್ನು ಧರಿಸುವೆವು, ಹಾಗೂ ಆತನು

ಭೂಲೋಕದಲ್ಲಿ ತನ್ನ ದೇಹದಂತೆ ನಮ್ಮನ್ನು ತೆಗೆದು ಕೊಳ್ಳುವನು ಮತ್ತು ನಮ್ಮನ್ನು ತನ್ನ ಸಭೆಯೆಂದು ಕರೆಯುವನು.

ಮದುವೆ ಅಂದರೆ ಗಂಡ ಹೆಂಡತಿ ಇಬ್ಬರಿಗೂ ಒಂದು ಹೊಸ ಗುರುತಿಸುವಿಕೆಯಾಗಿರುವುದಾಗಿದೆ. ಇದು ವಧುವಿನ ವಿಷಯದಲ್ಲಿ ವಿಶೇಷವಾಗಿ ಸತ್ಯವಾಗಿದೆ, ಯಾಕಂದರೆ ಆಕೆ ಮದುವೆಯ ಜೀವಾವಧಿ ಒಪ್ಪಂದದೊಳಗೆ ಪ್ರವೇಶಿಸುವಾಗ, ಆಕೆ ಹೊಸ ಹೆಸರನ್ನು ತನ್ನ ಗಂಡನ ಹೆಸರನ್ನು ಪಡೆದುಕೊಳ್ಳುವಳು. ಹಾಗೆಯೇ, ನಾವು ಸಭೆಯಲ್ಲಿ ಪ್ರವೇಶಿಸುವಾಗ ಮತ್ತು "ಕ್ರಿಸ್ತನ ಸಭೆಗಳ" ಭಾಗವಾಗುವಾಗ (ರೋಮಾಪುರ 16:16), ಕ್ರಿಸ್ತನೊಂದಿಗಿನ ನಮ್ಮ ಐಕ್ಯತೆಯಿಂದ ಉಕ್ಕಿಬರುವ ನೂತನ ಗುರುತಿಸುವಿಕೆಯಲ್ಲಿ ನಾವು ಪ್ರವೇಶಿಸುವೆವು.

ಗಂಡ ಮತ್ತು ಹೆಂಡತಿ ಒಂದಾಗುವಂತೆ, ದೇವರು ಮದುವೆಯನ್ನು ಏರ್ಪಡಿಸಿರುವನು: "ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು" (ಆದಿಕಾಂಡ 2:24). ಅದರಂತೆಯೇ, ಮಾರ್ಪಡುವಿಕೆಯಲ್ಲಿ, ಕ್ರಿಸ್ತನೊಂದಿಗೆ ನಾವು ಒಂದಾಗುತ್ತೇವೆ (ರೋಮಾಪುರ 6:3). ಈ ಒಂದಾಗುವಿಕೆಯು ಗಂಡ ಹೆಂಡತಿ ಮದುವೆಯಲ್ಲಿ ಅನುಭವಿಸುವ ಏಕತೆಯಿಂದ ಉದಾಹರಿಸಲ್ಪಡುವಷ್ಟು ಆಳವಾದದ್ದಾಗಿದೆ: "ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ ... . ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ" (ಎಫೆಸ 5:28-30).

ಒಬ್ಬ ವ್ಯಕ್ತಿಯು ಮಾಡುವ ಪ್ರಮುಖ ಒಪ್ಪಂದಗಳಲ್ಲಿ ಒಬ್ಬನು ಕ್ರೈಸ್ತನಾಗುವದನ್ನು ಬಿಟ್ಟರೆ, ಮದುವೆಯಾಗುವುದು ಪ್ರಾಮುಖ್ಯವಾದದ್ದಾಗಿರುತ್ತದೆ. ಮದುವೆಯ ಸಂಬಂಧವು ಅಸಾಮಾನ್ಯವಾಗಿ ಮಹತ್ವವುಳ್ಳದ್ದಾಗಿದೆ. ಅದರಲ್ಲಿ ಪ್ರವೇಶಿಸುವವನು ಭಿನ್ನವಾದ ವ್ಯಕ್ತಿಯಾಗತಕ್ಕದ್ದು. ಮದುವೆಯ ಮೊದಲು ಅವನು *ಒಬ್ಬನಾಗಿದ್ದನು,* ಆದರೆ ಮದುವೆಯಲ್ಲಿ ಅವನು *ಎರಡು* ಆಗುತ್ತಾನೆ; ಮದುವೆಯ ಮೊದಲು ಅವನು ತನ್ನಷ್ಟಕ್ಕೆ ತಾನೇ ಇದ್ದನು, ಆದರೆ ಮದುವೆಯಲ್ಲಿ ಅವನು ಇನ್ನೊಬ್ಬರಿಗೆ *ಒಳಪಡುತ್ತಾನೆ.* ಅದೇ ರೀತಿಯಲ್ಲಿ, ನಾವು ಹೊಸ ಒಡಂಬಡಿಕೆಯ ಸಭೆಯನ್ನು ಪ್ರವೇಶಿಸುವಾಗ, ನಾವು ಕ್ರಿಸ್ತನ ದೇಹವಾಗುತ್ತೇವೆ. ನಾವಿದ್ದಂತೆ ಇನ್ನು ಇರುವಂಥವರಲ್ಲ; ನಾವು *ಕ್ರೈಸ್ತರಾಗಿದ್ದೇವೆ,* ಕ್ರಿಸ್ತನೊಂದಿಗೆ ನಾವು ಐಕ್ಯರಾಗುವದರಿಂದ ಗುರುತಿಸಲ್ಪಡುವ ವ್ಯಕ್ತಿಗಳಾಗಿದ್ದೇವೆ.

## ಅಸಮಾನವಲ್ಲದ ಸಂಬಂಧ

ಮೂರನೆಯದು, ವಧುವು ಮದಲಿಂಗನಿಗೆ ಒಂದು ವಿಶೇಷವಾದ ಮುಂದುವರಿಯುವ ಒಪ್ಪಂದವನ್ನು ಕಾಪಾಡಿಕೊಂಡು ಹೋಗುತ್ತಾಳೆ. ವಧು ಮತ್ತು ಮದಲಿಂಗನಂತೆ ಅದೇ ಕ್ರಮದಲ್ಲಿ ಭೂಲೋಕದಲ್ಲಿ ಯಾವ ಸಂಬಂಧವೂ ಇರುವದಿಲ್ಲ.

ಗಂಡ ಮತ್ತು ಹೆಂಡತಿಯ ಸಂಬಂಧಕ್ಕೆ ವಿಸ್ತರಿಸಲ್ಪಟ್ಟ ಒಂದು ಸಮಾಂತರತೆಯೊಂದಿಗೆ ಎಫೆಸ 5:22-33ರಲ್ಲಿ ಪೌಲನು ಕ್ರಿಸ್ತನೊಂದಿಗೆ ಸಭೆಗೆ ಇರುವ ಬಂಧನವನ್ನು ವಿವರಿಸಿದ್ದಾನೆ. ಅವನ ದೃಷ್ಟಾಂತವು ಕ್ರೈಸ್ತ ಮದುವೆಯಲ್ಲಿ ಗಂಡನಿಗೆ ಮತ್ತು ಹೆಂಡತಿಗೆ ದೇವರು ಕೊಟ್ಟ ಪಾತ್ರಗಳನ್ನು ವಿವರಿಸುತ್ತದೆ. ಆದರೆ ಅವನ ಪ್ರಾಥಮಿಕ ಕೇಂದ್ರೀಕರಿಸುವಿಕೆಯು ಕ್ರಿಸ್ತನಿಗೂ ಮತ್ತು ಸಭೆಗೂ ಮಧ್ಯದಲ್ಲಿ

ಅಸ್ತಿತ್ವದಲ್ಲಿರುವ ಸಂಬಂಧದ ಮೇಲಿರುತ್ತದೆ (ಎಫೆಸ 5:32).

ತನ್ನ ಹೋಲಿಕೆಯಲ್ಲಿ, ಪೌಲನು ಪ್ರೇರೇಪಣೆಯಿಂದ, ಅಧೀನತೆಯ ಮೇಲೆ ಒತ್ತಡವನ್ನು ಇಡುತ್ತಾನೆ. ಕ್ರಿಸ್ತನ ವಧುವಾಗಿ, ಸಭೆಯು ಕ್ರಿಸ್ತನಿಗೆ ತನ್ನ ಶಿರಸ್ಸಿನಂತೆ ಅಧೀನವಾಗುತ್ತದೆ. "ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" (ಎಫೆಸ 5:22, 23) ಎಂದು ಅವನು ಹೇಳಿದ್ದಾನೆ. ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗುವಂತೆ, ಸಭೆಯು ಕ್ರಿಸ್ತನ ಕಡೆಗೆ ತನ್ನ ನಾಯಕನಂತೆ ನೋಡುತ್ತದೆ.

"ಸರ್ವಾಧಿಕಾರಿಯು ಪರಿಪೂರ್ಣನಾಗಿದ್ದರೆ, ಪರಿಪೂರ್ಣ ಸರಕಾರವು ಸರ್ವಾಧಿಕಾರತ್ವವಾಗಿರುತ್ತದೆ" ಎಂದು ಯಾರೋ ಒಬ್ಬರು ಹೇಳಿದ್ದಾರೆ. ಸಭೆಯು ಪರಿಪೂರ್ಣ ಕ್ರಿಸ್ತನಿಗೆ ಅಧೀನವಾಗುತ್ತದೆ ಮತ್ತು ಹೀಗೆ ಪರಿಪೂರ್ಣ ನಾಯಕತ್ವವನ್ನು ಅನುಭವಿಸುತ್ತದೆ. ಸಭೆಯು ಯಾವುದೇ ಮನುಷ್ಯನನ್ನು ಜನರ ಯಾವುದೇ ಗುಂಪನ್ನು, ತನ್ನ ಅಧಿಕಾರಕ್ಕಾಗಿ ಭೂಮಿಯ ಮೇಲೆ ಯಾವುದೇ ಮುಖ್ಯ ಕಚೇರಿಗಳನ್ನು ನೋಡು ವುದಿಲ್ಲ. ದೇವರ ನಿಜವಾದ ಸಭೆಗೆ ಒಂದೇ ಒಂದು ಶಿರಸ್ಸು, ಕರ್ತನಾದ ಕ್ರಿಸ್ತನು ಇರುತ್ತಾನೆ.

ಬೈಬಲ್ ಕ್ಲಾಸಿನಲ್ಲಿ ಎಫೆಸ 5:22-33ನ್ನು ನಾನು ಚರ್ಚಿಸುವಾಗಲೆಲ್ಲಾ, ವಚನ 23 ಹೆಂಡತಿಗೆ ಸಂಬಂಧಿಸಿರುವುದು ಆದರೆ ಗಂಡನಿಗಲ್ಲ, ಮತ್ತು ವಚನ 25 ಗಂಡನಿಗೆ ಸಂಬಂಧಿಸಿರುವುದು ಆದರೆ ಹೆಂಡತಿಗಲ್ಲ ಎಂದು ಹೇಳುತ್ತೇವೆ. ಹೆಂಡತಿಗಾಗಿರುವ ಪದವು "ಅಧೀನತೆ," ಮತ್ತು ಗಂಡನಿಗಾಗಿ ಇರವ ಪದ "ತ್ಯಾಗ" ಎಂದಿದೆ. ಪೌಲನ ಪ್ರಕಾರವಾಗಿ ಒಳ್ಳೇ ಗಂಡನಿಗೆ ಕನಿಷ್ಠ ಪಕ್ಷ ಎರಡು ಗುಣಗಳಿರುವವು: (1) ಕ್ರಿಸ್ತನು ಸಭೆಯನ್ನು ಪ್ರೀತಿಸಿದಂತೆಯೇ ಗಂಡನು ತನ್ನ ಹೆಂಡತಿಯನ್ನು ತ್ಯಾಗದೊಂದಿಗೆ ಪ್ರೀತಿ ಸುವನು, ಮತ್ತು (2) ಅವನು ಆಕೆಗೆ ಉನ್ನತ ಮಟ್ಟದ ಆತ್ಮಿಕ ನಾಯಕತ್ವ ಒದಗಿಸಲು ಹುಡುಕುವನು. ಹಾಗೆಯೇ ಪೌಲನ ಪ್ರಕಾರವಾಗಿ, ಒಳ್ಳೇ ಹೆಂಡತಿಯು ಕನಿಷ್ಠ ಪಕ್ಷ ಎರಡು ಗುಣಲಕ್ಷಣಗಳನ್ನು ಹೊಂದಿಕೊಂಡಿರುವಳು: (1) ತನ್ನ ಶಿರಸ್ಸಿನಂತೆ ಆಕೆ ತನ್ನ ಗಂಡನಿಗೆ ಅಧೀನಳಾಗುವಳು, ಮತ್ತು (2) ಸಭೆಯು ಕ್ರಿಸ್ತನನ್ನು ಪ್ರೀತಿಸುವಂತೆ ಅವನನ್ನು ಪ್ರೀತಿಸುವಳು.

ಆತನ ಸಭೆಯನ್ನು ಪ್ರವೇಶಿಸದೇ ಹಾಗೂ ಆತನ ಸಭೆಯಾಗಿರದೇ ಯಾರೂ ಕ್ರಿಸ್ತನೊಂದಿಗೆ ಯಾವ ಬಾಹ್ಯ ಸಂಬಂಧವಿಲ್ಲದೇ ಏಕೈಕ ವಧು/ವರರ ಅನ್ಯೋನ್ಯತೆ ಇರಲಾರದು. ಮನುಷ್ಯನ ಹೆಂಡತಿಯಂತೆ ಅದೇ ಅವಕಾಶವನ್ನು ಬೇರೆ ಇತರ ಮಹಿಳೆಗೆ ಕೊಡಲಾಗುವುದಿಲ್ಲವೋ ಹಾಗೆಯೇ ಬೇರೆ ಇತರ ಸಂಘಟನೆಯು ಇಲ್ಲವೇ ಸಂಸ್ಥೆಯು - ಎಷ್ಟೋ ಪ್ರಸಿದ್ಧವಾಗಿದ್ದರೂ ಇಲ್ಲವೇ ಸೇವೆಗಾಗಿ ಸಮರ್ಪಿಸಿಕೊಂಡಿದ್ದರೂ - ಕ್ರಿಸ್ತನೊಂದಿಗೆ ವಧು/ವರನ ಅವಕಾಶವು ಕೊಡಲ್ಪಡಲಾರದು.

## ಮಿತಿಯಿಲ್ಲದ ಒದಗಿಸುವಿಕೆಗಳು

ನಾಲ್ಕನೆಯದು, ಕ್ರಿಸ್ತನ ವಧುವಾಗಿರುವುದು ಅಂದರೆ ಕ್ರಿಸ್ತನ ಜೋಪಾಸನೆ ಮತ್ತು ಪ್ರೀತಿಯ ಒದಗಿಸುವಿಕೆಗಳನ್ನು ಹೊಂದಿಕೊಂಡಿರುವಂಥದ್ದು. ಅರಸರ ಅರಸನೂ ಮತ್ತು ಕರ್ತರ ಕರ್ತನೂ ಆದಾತನ ವಧುವಿಗೆ ಬರುವ ಆಶೀರ್ವಾದಗಳನ್ನು ಯಾರು ಸಂಪೂರ್ಣವಾಗಿ ಗ್ರಹಿಸಿಕೊಳ್ಳಬಲ್ಲರು?

ಪ್ರಾರಂಭಿಸುವದರೊಂದಿಗೆ, ಯೇಸುವು ತನ್ನ ಸಭೆಗಾಗಿ *ರಕ್ಷಣೆಯನ್ನು* ಒದಗಿಸುತ್ತಾನೆ. ಪೌಲನು ಕ್ರಿಸ್ತನನ್ನು "ದೇಹದ ರಕ್ಷಕನು" ಎಂದು ಉಲ್ಲೇಖಿಸಿದನು (ಎಫೆಸ 5:23). ಅದಕ್ಕಾಗಿ ತನ್ನ ಪ್ರಾಣವನ್ನು ಕೊಡುವದರಿಂದ ತನ್ನ ಸಭೆಗೆ ಈ ಜೀವವನ್ನು ತಂದನು: "... ಕ್ರಿಸ್ತನು ಸಹ ಸಭೆಯನ್ನು ಪ್ರೀತಿಸಿದಂತೆ ಮತ್ತು ಅದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟಂತೆ" (ಎಫೆಸ 5:25). ಇಷ್ಟೇ ಅಲ್ಲದೇ, ಯೇಸುವು ಸಭೆಯನ್ನು *ಪೋಷಿಸುತ್ತಾನೆ.* "ಕ್ರಿಸ್ತನು ಸಭೆಯನ್ನು ಪೋಷಿಸಿ ಸಂರಕ್ಷಿಸುವಂತೆ" (ಎಫೆಸ 5:29). ಗಂಡನು ತನ್ನ ಹೆಂಡತಿಯನ್ನು ಪೋಷಿಸಿ ಸಂರಕ್ಷಿಸಬೇಕೆಂದು ಪೌಲನು ಹೇಳಿದ್ದಾನೆ. ಯೇಸುವು ಸಭೆಯ ಪರಿಶುದ್ಧತೆಯನ್ನು ಕಾಪಾಡುತ್ತಾನೆ ಮತ್ತು ಅದಕ್ಕೆ ಭವಿಷ್ಯವನ್ನು ಪಡೆದುಕೊಳ್ಳುತ್ತಾನೆ: "ಆತನು ಅದನ್ನು ಪ್ರತಿಷ್ಠೆ ಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು" (ಎಫೆಸ 5:26, 27).

ಮಕ್ಕಳು (ಮತ್ತು ವಯಸ್ಕರು) ಸಿಂಡ್ರೆಲ್ಲಾಳ ಮನೋರಂಚಕವಾದ ಕಥೆಯನ್ನು ಆನಂದಿಸುತ್ತಾರೆ. ಕೆಟ್ಟದಾಗಿ ನಡಿಸಿಕೊಳ್ಳಲ್ಪಟ್ಟ ದಾಸಿ ಬಾಲಕಿಯು ಅಂತಿಮವಾಗಿ ಒಬ್ಬ ರಾಜ ಕುಮಾರನನ್ನು ಮದುವೆಯಾಗುವುದು ನಮ್ಮನ್ನು ಚಕಿತಗೊಳಿಸುತ್ತದೆ. ಕಥೆಯನ್ನು ಅದರ ಅಂತ್ಯವನ್ನು ದಾಟಿ ತೆಗೆದುಕೊಳ್ಳೋಣ. "ಉಳಿದ ಕಥೆಯು" ಯಾವುದಾಗಿತ್ತು? ರಾಜ ಕುಮಾರನ ಹೆಂಡತಿಯಾಗಿ ಸಿಂಡ್ರೆಲ್ಲಾಳ ಜೀವನ ಹೇಗಿತ್ತು? ಜೀವಿತವು ಆಕೆಗಾಗಿ ಹೇಗೆ ಭಿನ್ನವಾಗಿತ್ತು! ಮೊದಲು ಬಡತನಕ್ಕೆ, ಗುಲಾಮತನದ ಕೆಲಸಕ್ಕೆ, ತಪ್ಪು ತಿಳಿಯಲ್ಪಡುವದಕ್ಕೆ, ಮತ್ತು ನಿರಾಶೆಗೆ ರೂಢಿಸಿಕೊಂಡಿದ್ದವಳು, ಈಗ ಸುಖ ಭೋಗಗಳನ್ನು, ಐಶ್ವರ್ಯಗಳನ್ನು, ಸಹಾಯವನ್ನು, ಮತ್ತು ತನ್ನ ನೂತನ ಮನೆ ಮತ್ತು ಜೀವನದಲ್ಲಿ ಮಹಿಮೆಯುಳ್ಳ ಭವಿಷ್ಯವನ್ನು ಕಂಡುಕೊಂಡಳು. ರಾಜಕುಮಾರನೊಂದಿಗಿನ ಆಕೆಯ ಮದುವೆಯು ಆಕೆಗೆ ನೂತನ ಗುರುತಿಸುವಿಕೆಯನ್ನೂ, ನೂತನ ಜೀವಿತವನ್ನೂ ಮತ್ತು ಅಗಣಿತ ಆನಂದಗಳನ್ನೂ ತಂದಿತು.

ವಧುವು ತನ್ನ ಗಂಡನ ಪ್ರೀತಿಯ ಜೋಪಾಸನೆಯಲ್ಲಿ ಬರುವಂತೆ ಕ್ರಿಸ್ತನ ದೇಹದೊಳಗೆ ನಮ್ಮ ಪ್ರವೇಶವು ಕ್ರಿಸ್ತನ ಜೋಪಾಸನೆ ಮತ್ತು ಒದಗಿಸುವಿಕೆಗಳ ಅಧೀನತೆಯಲ್ಲಿ ನಮ್ಮನ್ನು ತರುವುದು.

## ಸರಿಸಮಾನವಲ್ಲದ ವಾಗ್ದಾನ

ಐದನೆಯದು, ಕ್ರಿಸ್ತನ ವಧುವಿನಂತೆ, ಸಭೆಯು ಕ್ರಿಸ್ತನು ಆನಂದಿಸುವ ಅದೇ ಭವಿಷ್ಯವನ್ನು ಆನಂದಿಸುವುದು. ಸಭೆಯು ಕ್ರಿಸ್ತನು ಹೋಗುವಲ್ಲಿ ಹೋಗುವುದು, ಕ್ರಿಸ್ತನು ಸ್ವೀಕರಿಸುವದನ್ನು ಸ್ವೀಕರಿಸುವುದು, ಮತ್ತು ನಿತ್ಯತ್ವದಲ್ಲಿ ಕ್ರಿಸ್ತನೊಂದಿಗೆ ವಾಸಿಸುವುದು.

ಸಭೆಯೊಂದಿಗೆ ಸಂಬಂಧಿಸಿ ಹೊಸ ಒಡಂಬಡಿಕೆಯಲ್ಲಿ "ವಧು" ಎಂಬ ಪದದ ನಿರ್ದಿಷ್ಟವಾದ ಉಪಯೋಗವು ಪ್ರಕಟನೆ 21 ಮತ್ತು 22ರಲ್ಲಿ ಕಂಡು ಬರುತ್ತದೆ. ಯೋಹಾನನು ಈ ಪದವನ್ನು ಸಭೆಯ ಸ್ವಭಾವವನ್ನು ಅದರ ಅಂತಿಮ ಸ್ಥಿತಿಯೊಂದಿಗೆ ಕೂಡಿಸಲು ಉಪಯೋಗಿಸಿದನು. "ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವದನ್ನು ಕಂಡೆನು; ಅದು ತನ್ನ

ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು" (ಪ್ರಕಟನೆ 21:2) ಎಂದು ಅವನು ಮೊದಲು ನೋಡಿದನು. ಅನಂತರ, ಯೋಹಾನನು, "ಬಾ, ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿಯನ್ನು ನಿನಗೆ ತೋರಿಸುವೆನು" (ಪ್ರಕಟನೆ 21:9) ಎಂದು ದೇವದೂತನಿಂದ ಹೇಳಲ್ಪಟ್ಟನು. ಆಮೇಲೆ ಅವನು ಆತ್ಮನಲ್ಲಿ ದೊಡ್ಡ, ಎತ್ತರವಾದ ಬೆಟ್ಟಕ್ಕೆ ಒಯ್ಯಲ್ಪಟ್ಟನು ಹಾಗೂ "ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವದನ್ನು ನನಗೆ ತೋರಿಸಿದನು ..." (ಪ್ರಕಟನೆ 21:10, 11). ಪ್ರಕಟನೆಯು ಆತ್ಮನ ಮತ್ತು ಮದಲಗಿತ್ತಿಯ ಅಮಂತ್ರಣದೊಂದಿಗೆ ಮುಕ್ತಾಯವಾಗುತ್ತದೆ: "ಆತ್ಮನೂ ಮದಲಗಿತ್ತಿಯೂ - 'ಬಾ' ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 22:17).

ಆತ್ಮನ ಪ್ರಕಾರವಾಗಿ, ಸಭೆಯು ಭೂಲೋಕದ ಸ್ಥಿತಿಯಲ್ಲಿ ಕ್ರಿಸ್ತನ ಪ್ರೇಯಸಿಯಂತೆ ಮತ್ತು ಪರಲೋಕದ ಸ್ಥಿತಿಯಲ್ಲಿ ಕ್ರಿಸ್ತನ ಹೆಂಡತಿಯಂತೆ ಕಾಣಲ್ಪಡಬೇಕಾಗುತ್ತದೆ. ಇದು 2 ಕೊರಿಂಥ 11:2ರಲ್ಲಿ, ಪೌಲನು ನಂಬಿಗಸ್ತಿಕೆಯನ್ನು ಕುರಿತ ಪ್ರಬೋಧನೆಗೆ ಹೊಂದಿಕೊಳ್ಳುತ್ತದೆ: "ಯಾಕಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ."

ನಿಶ್ಚಯ ಕಾರ್ಯದ ನೆರವೇರುವಿಕೆಯು ನಿಜವಾದ ಮದುವೆಯಾಗಿದೆ. ಪರಿಶುದ್ಧ ಪಟ್ಟಣವಾದ, ನೂತನ ಯೆರೂಸಲೇಮಿನ ದರ್ಶನವನ್ನು ಯೋಹಾನನು ವಿವರಿಸಿದನು. ತನ್ನ ಗಂಡನಿಗಾಗಿ ಅಲಂಕೃತಳಾದ ಮದಲಗಿತ್ತಿಯಂತೆ ಅದು ಕೆಳಗಿಳಿದು ಬರುವಂತೆ ವಿವರಿಸಿದನು; ಮತ್ತು ಈ ದರ್ಶನವನ್ನು ಸಭೆಯು ನಿಶ್ಚಯಗೊಂಡದ್ದರಿಂದ ಮದುವೆಯಲ್ಲಿ ಚಲಿಸುವಂತೆ ವ್ಯಾಖ್ಯಾನಿಸಿದನು. "ಮದಲಗಿತ್ತಿ," ಎಂಬ ಪದದಿಂದ ಸಾಂಕೇತಿಕವಾದದ್ದರಿಂದ ಸಂಕೇತವು ಸಭೆಯ ಸ್ವಭಾವವನ್ನು ಸಭೆಯ ಭವಿಷ್ಯದೊಂದಿಗೆ ಮಿಶ್ರಗೊಳಿಸಲ್ಪಟ್ಟಿದೆ, ಇದು ಪರಲೋಕ ಪಟ್ಟಣವು ಕುರಿಮರಿಯಾದಾತನ ಹೆಂಡತಿಯಂತೆ ಕೆಳಗಿಳಿದು ಬರುವಂತೆ ಚಿತ್ರೀಕರಿಸಲ್ಪಟ್ಟಿದೆ.

ಯೇಸುವು ತನ್ನ ದೇಹವನ್ನು, ತನ್ನ ಸಭೆಯನ್ನು ರಕ್ಷಿಸುವ ವಾಗ್ದಾನಮಾಡಿದ್ದಾನೆ (ಎಫೆಸ 5:23). ಬೇರೆ ಸಂಸ್ಥೆಯನ್ನು ವಾಗ್ದಾನ ಮಾಡುವದಾಗಿ ಹೇಳಿರುವದಿಲ್ಲ. ಆತನ ಸಭೆಯ ಭವಿಷ್ಯವು ಪ್ರಕಟನೆಯಲ್ಲಿ ಮೊದಲು ಮಾಡಿದ ವಾಗ್ದಾನ ನೆರವೇರುವಿಕೆಯಂತೆ ಮತ್ತು ದುಷ್ಟನ ಮೇಲಿನ ಜಯದಂತೆ ಚಿತ್ರಿಸಲ್ಪಟ್ಟಿದೆ. ಆ ನಿತ್ಯವಾದ ಪಟ್ಟಣವನ್ನು ನೀವು ಹುಡುಕಬೇಕೆಂದರೆ ಪರಿಶುದ್ಧ ಬರಹಗಳು ಅದನ್ನು ಆತನ ಸಭೆಯಲ್ಲಿ ಕ್ರಿಸ್ತನಿಗೆ ವಿಶ್ವಾಸನೀಯದ ಮುಖಾಂತರ ಹುಡುಕಲಿಕ್ಕೆ ಮಾರ್ಗದರ್ಶನ ಮಾಡುತ್ತವೆ.

## ಕಳಂಕವಿಲ್ಲದ ಸೌಂದರ್ಯ

ಆರನೆಯದು, "ಮದಲಗಿತ್ತಿ" ಎಂಬ ಮಾತು ಸೌಂದರ್ಯವನ್ನು ಸೂಚಿಸುತ್ತದೆ. ಮದಲಗಿತ್ತಿಯ ಲಾವಣ್ಯವನ್ನು ಯಾವುದೂ ದಾಟಿ ಹೋಗಲಾರದು. ಆಕೆಯ ಸೌಂದರ್ಯ ಮತ್ತು ಆಕರ್ಷಣೆಯು ಗಾದೆ ಮಾತುಗಳಾಗಿರುವವು.

"ಇದಲ್ಲದೇ ಪರಿಶುದ್ಧ ಪಟ್ಟಣವಾದ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವದನ್ನು ಕಂಡೆನು; ಅದು ತನ್ನ *ಗಂಡನಿಗೋಸ್ಕರ ಅಲಂಕೃತ*

*ಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು*" (ಪ್ರಕಟನೆ 21:2; ಒತ್ತಿ ಹೇಳಿದ್ದು ನನ್ನದು) ಎಂದು ಯೋಹಾನನು ಬರೆದನು. ಯೆಶಾಯನು ಕರ್ತನ ಆಶೀರ್ವಾದಗಳ ಬಗ್ಗೆ ಬರೆದಂತೆ, ಒಂದು ಉದಾಹರಣೆಯಂತೆ ಮದುಮಗಳ ಆಕರ್ಷಣೆಯನ್ನು ಅವನು ವಿವರಿಸಿದನು: "ನಾನು ಯೆಹೋವನಲ್ಲಿ ಪರಮಾನಂದ ಪಡುವೆನು. ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು; ವರನು ಬಾಸಿಂಗವನ್ನು ಧರಿಸಿಕೊಳ್ಳುವಂತೆಯೂ ವಧುವು ತನ್ನನ್ನು ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಆತನು ನನಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದಾನಲ್ಲಾ" (ಯೆಶಾಯ 61:10). ಇದಲ್ಲದೆ ದೇವರ ನಂಬಿಗಸ್ತ ಜನರನ್ನು ಮದುಮಗಳ ಹೋಳೆಯುವಿಕೆಗೆ ಹೋಲಿಸಿರುವನು: "… ಯುವಕನು ಯುವತಿಯನ್ನು ವರಿಸುವಂತೆ ನಿನ್ನ ಮಕ್ಕಳು ನಿನ್ನನ್ನು ವರಿಸುವರು; ವರನು ವಧುವಿನಲ್ಲಿ ಆನಂದಿಸುವ ಹಾಗೆ ನಿನ್ನ ದೇವರು ನಿನ್ನಲ್ಲಿ ಆನಂದಿಸುವನು" (ಯೆಶಾಯ 62:5).

ಮದುವೆಯ ಡ್ರೆಸ್ಸನ್ನು ಧರಿಸಿಕೊಂಡು ಮದುವೆಯ ಕಾರ್ಯಕ್ಕಾಗಿ ನಡೆದು ಬರುವವರೆಗೆ ಮದುಮಗನ ಮದುವೆಯ ಡ್ರೆಸ್ಸನ್ನು ನೋಡದೇ ಇರುವ ಅಮೇರಿಕಾದಲ್ಲಿಯ ಪದ್ಧತಿಯು ಅನೇಕ ದಂಪತಿಗಳಿಂದ ಗೌರವಿಸಲ್ಪಟ್ಟಿದೆ. ಈ ರೂಢಿಯನ್ನು ಅನುಸರಿಸಿ, ಮದುಮಗಳು ನಿಜವಾಗಿಯೂ "ತನ್ನ ಗಂಡನಿಗಾಗಿ" ಅಲಂಕರಿಸಲ್ಪಟ್ಟಿದ್ದಾಳೆ. ಮದುಮಗನು ಆಕೆಯನ್ನು ಮೊದಲು ನೋಡುವಾಗ, ಆಕೆಯ ಸೌಂದರ್ಯವು ವರ್ಣಿಸಲಿಕ್ಕಾಗದಷ್ಟನ್ನಾಗಿ ನೋಡುತ್ತಾನೆ.

ಸಭೆಯು, ಕ್ರಿಸ್ತನ ಮದಲಗಿತ್ತಿಯು, ನೀತಿಯ ಉಡುಪುಗಳಿಂದ ಮತ್ತು ಪರಿಶುದ್ಧ ತೆಯ ವಿವಾಹದ ಉಡುಪಿನೊಂದಿಗೆ ಧರಿಸಲ್ಪಟ್ಟಿರುತ್ತಾಳೆ. "ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದೂ ವಾಕ್ಯೋಪದೇಶ ಸಹಿತವಾದ ಜಲ ಸ್ನಾನವನ್ನು ಮಾಡಿಸಿ ಶುದ್ಧಮಾಡಿದನು" (ಎಫೆಸ 5:27) ಎಂದು ಪೌಲನು ಬರೆದನು.

ಸಭೆಯು ಕ್ರಿಸ್ತನಿಗೆ ಸೌಂದರ್ಯವುಳ್ಳದ್ದಾಗಿದ್ದರೆ, ಜಗತ್ತಿಗೂ ಅದು ಸೌಂದರ್ಯವು ಳ್ಳದ್ದಾಗಿರುವುದು. "ನಿಮ್ಮ ಗುಣಗಳ ಬಗ್ಗೆ ಗಮನ ವಹಿಸಿರಿ ಮತ್ತು ನಿಮ್ಮ ನಿಮ್ಮ ಗುಣವು ನಿಮ್ಮ ಗೌರವದ ಬಗ್ಗೆ ಗಮನ ವಹಿಸುವುದು" ಎಂಬ ಮಾತಿನಂತೆ ಇದು ಇರುವುದು. ಕ್ರಿಸ್ತನ ವಾಕ್ಯದ ಮುಖಾಂತರ ಸಭೆಯು ಶುದ್ಧವಾಗಿ ಉಳಿಯುವುದು ಮತ್ತು ಹೀಗೆ ಅದು ಕ್ರಿಸ್ತನಿಗೆ ಸೌಂದರ್ಯವಾಗಿರುವುದು, ಭೂಲೋಕದಲ್ಲಿ ಅದರ ಗೌರವವು ಅದಕ್ಕಿರುವಂತೆ ಇರುವುದು.

ವಾಕ್ಯದಲ್ಲಿ ನೆಲೆಗೊಂಡಿರುವದರಿಂದ, ಕ್ರಿಸ್ತನಿಗೆ ನಿಷ್ಠೆಯಿಂದಿರುವದರಿಂದ, ಸಭೆಯು ಪರಲೋಕದಲ್ಲಿ ಕ್ರಿಸ್ತನೊಂದಿಗೆ ಮದುವೆಗಾಗಿ ತನ್ನನ್ನು ಅಲಂಕರಿಸಿಕೊಂಡಿರುವುದು. ನಾವು ದೇವರ ಮುಂದೆ ಕಲೆಯಿಲ್ಲದ ಗುಣದೊಂದಿಗೆ ಮತ್ತು ದೂಷಣೆಯಿಲ್ಲದ ಆತ್ಮನಿಂದ ಆ ವಿಶೇಷವಾದ ದಿನಕ್ಕಾಗಿ ನಮ್ಮನ್ನು ಸಿದ್ಧಪಡಿಸಿಕೊಳ್ಳುವೆವು.

## ಮುಕ್ತಾಯ

ತನ್ನ ಗಂಡನಿಗಾಗಿ ಅಲಂಕರಿಸಿಕೊಂಡ ಮದಲಗಿತ್ತಿಗಿಂತ ಹೆಚ್ಚು ಸುಂದರವಾ ದದ್ದು ಯಾವುದು ಇದೆ? ಸೌಂದರ್ಯ, ಶುದ್ಧತೆ, ಮತ್ತು ಸಹಿಸಿಕೊಳ್ಳುವ ನಿಷ್ಠೆ ಎಲ್ಲವೂ "ಮದಲಗಿತ್ತಿ" ಎಂಬ ಪದದಲ್ಲಿ ಹೇಳಲ್ಪಟ್ಟಿವೆ. ಸಭೆಯ ಸ್ವಭಾವವನ್ನು ವ್ಯಕ್ತಪಡಿಸಲಿಕ್ಕೆ

ಈ ರೂಪಕವನ್ನು ಪರಿಶುದ್ಧಾತ್ಮನು ಯಾಕೆ ಆಯ್ದುಕೊಂಡನು ಎಂಬುದನ್ನು ನೋಡುವುದು ಸುಲಭವಾಗಿದೆ. ಈ ಮಾತಿನಲ್ಲಿ, ಕ್ರಿಸ್ತನೊಂದಿಗೆ ಸಭೆಯು ಕಾಪಾಡಿಕೊಳ್ಳುವ, ಕ್ರಿಸ್ತನಿಗೆ ಸಭೆಯ ನಿಷ್ಠೆಯ, ಸಭೆಗಾಗಿ ಕ್ರಿಸ್ತನ ಒದಗಿಸುವಿಕೆಗಳ, ಸಭೆಗೆ ಕ್ರಿಸ್ತನು ಕೊಡುವ ಗುರುತಿಸುವಿಕೆಯ ಮತ್ತು ಸಭೆಗಾಗಿರುವ ಕ್ರಿಸ್ತನ ಭವಿಷ್ಯದ ಅದ್ವಿತೀಯ ಸಂಬಂಧವನ್ನು ನಾವು ನೋಡುತ್ತೇವೆ. ಈ ರೂಪಕವು ಕ್ರೈಸ್ತರಾಗಿ ನಮಗಿರುವ ಅವಕಾಶಗಳನ್ನು ಆಕಾಂಕ್ಷೆಗಳನ್ನು ನಮ್ಮ ಹಂಗುಗಳನ್ನು ಮತ್ತು ನಮ್ಮ ಲಾಭಗಳನ್ನು ನಮ್ಮ ಮನಸ್ಸಿಗೆ ತರುತ್ತದೆ. ಕ್ರಿಸ್ತನ ಪಕ್ಕದಲ್ಲಿ ಸಭೆಯು ಸುಂದರವಾದ, ಮಹಿಮೆಯುಳ್ಳ ಸ್ಥಳದೊಂದಿಗೆ ನಮ್ಮ ಮನಸ್ಸುಗಳನ್ನು ಅದು ತುಂಬಿ ತುಳುಕಿಸುತ್ತದೆ.

ಸಭೆಯು ಕ್ರಿಸ್ತನ ಮದಲಗಿತ್ತಿಯಾಗಿರುವಾಗ, ಆತನ ಸಭೆಯ ಸದಸ್ಯನಾಗಿರುವದಕ್ಕೆ ಯಾರು ಬಯಸುವದಿಲ್ಲ? ಕ್ರಿಸ್ತನ ಮದಲಗಿತ್ತಿಯಾಗಿರುವುದು ಎಂಥಾ ಭಾಗ್ಯವಲ್ಲವೇ! ಕ್ರಿಸ್ತನ ದೇಹವನ್ನು ಪ್ರವೇಶಿಸದವರು ಮತ್ತು ಕ್ರಿಸ್ತನ ಅನುಯಾಯಿಗಳಂತೆ ಜೀವಿಸದವರು ಸಭೆಯ ನಿಜವಾದ ಸ್ವಭಾವವನ್ನು ನಿಶ್ಚಯವಾಗಿ ತಿಳಿದವರಾಗಿರುವದಿಲ್ಲ.

ಒಬ್ಬನು ನಿಮಗೆ ಬಹಳವಾದ ಆಸ್ತಿಯನ್ನು ಬಿಟ್ಟುಕೊಟ್ಟು ಅದನ್ನು ನಿಮ್ಮ ಮನಸ್ಸಿಗೆ ಬಂದಂತೆ ಉಪಯೋಗಿಸಿ ಎಂದು ಹೇಳುವನೆಂದು ಕಲ್ಪಿಸಿರಿ. ನೀನು ಅದನ್ನು ಸ್ವೀಕರಿಸುವಿಯೋ? *ರೀಡರ್ಸ್ ಡೆಜೆಸ್ಟಿನ್* ಹತ್ತು ಮಿಲಿಯನ್ ಡಾಲರುಗಳ ಲಾಟರಿಯನ್ನು ಯಾರಾದರೂ ತಿರಸ್ಕರಿಸುವದನ್ನು ನೀನು ಊಹಿಸಬಹುದೋ? "ಹತ್ತು ಮಿಲಿಯನ್ ಡಾಲರುಗಳೋ? ಕ್ಷಮಿಸಿ, ನನಗೆ ಅದರಲ್ಲಿ ಆಸಕ್ತಿಯಿಲ್ಲವಲ್ಲ" ಎಂದು ಹೇಳಬಹುದೋ? ಉತ್ತರವು ಸ್ಪಷ್ಟವಾಗಿದೆ. ನೀವು ಹೊಂದಿಕೊಂಡ ಐಶ್ವರ್ಯದ ಬಗ್ಗೆ ನೀವು ಬಹಳವಾಗಿ ಆನಂದಗೊಳ್ಳುವಿರಿ.

ತನ್ನ ಸಭೆಯನ್ನು ಸೇರುವದಕ್ಕೆ ಮತ್ತು ಆತನ ಮದಲಗಿತ್ತಿಯಾಗಿ ಜೀವಿಸಲಿಕ್ಕೆ ಕ್ರಿಸ್ತನ ಅಮಂತ್ರಣವು ಭೂಲೋಕದ ಎಲ್ಲಾ ಐಶ್ವರ್ಯಗಳನ್ನೂ, ಆನಂದ, ಮಹಿಮೆಗಳ ಸ್ಥಾನಗಳನ್ನೂ ದಾಟಿ ಹೋಗುತ್ತದೆ. ಇಲ್ಲಿ ನಿಮಗೆ ಸಮೃದ್ಧಿಯಾಗಿ ಒದಗಿಸುವ ಮತ್ತು ಪರಲೋಕದಲ್ಲಿ ನಮ್ಮ ಗ್ರಹಿಕೆಗಿಂತಲೂ ಮಿಗಿಲಾದದ್ದನ್ನು ಒದಗಿಸುವ ಯೇಸುವಿನೊಂದಿಗಿನ ನಿತ್ಯ ಸಂಬಂಧದಲ್ಲಿ ಪ್ರವೇಶಿಸಲು ಅದು ನಮ್ಮನ್ನು ಆಮಂತ್ರಿಸುತ್ತದೆ.

"ಪೇತ್ರನು ಅವರಿಗೆ - ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮನ ದಾನವನ್ನು ಹೊಂದುವಿರಿ; ... ಮತ್ತು ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" (ಅಪೊಸ್ತಲರ ಕೃತ್ಯಗಳು 2:38, 47).

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಮದಲಗಿತ್ತಿಯ ಗುಣಲಕ್ಷಣಗಳನ್ನು ಯಾದಿ ಮಾಡಿರಿ.
2. ಸಭೆಯನ್ನು "ಕ್ರಿಸ್ತನ ಮದಲಗಿತ್ತಿಯಂತೆ" ಯಾವ ಹೊಸ ಒಡಂಬಡಿಕೆಯ ಬರಹಗಾರನು ನಿಶ್ಚಿತವಾಗಿ ಉಲ್ಲೇಖಿಸುತ್ತಾನೆ?
3. ಕ್ರಿಸ್ತನಿಗೆ ನಿಷ್ಠೆಯಿಂದ ಇರುವುದು ಎಂಬುದರ ಅರ್ಥವೇನು?
4. ಮದುವೆಯು ನಮ್ಮ ವ್ಯಕ್ತಿತ್ವವನ್ನು ಹೇಗೆ ಬದಲಾಯಿಸುತ್ತದೆ?
5. ಮದುವೆಯು ನಾವು ಮಾಡುವ ಬಲವಾದ ವಚನ ಬಾಧ್ಯತೆಗಳಲ್ಲಿ ಒಂದಾಗಿರುವುದೋ?
6. "ಅಧೀನತೆ" ಎಂಬ ಪದದ ಅರ್ಥವೇನು?
7. "ಪರಿಪೂರ್ಣ ಸರಕಾರವು ಸರ್ವಾಧಿಕಾರಿಯು ಪರಿಪೂರ್ಣವಾಗಿದ್ದರೆ ಸರ್ವಾಧಿ ಕಾರತ್ವವಾಗುತ್ತದೆ" ಎಂಬ ಹೇಳಿಕೆಯನ್ನು ಚರ್ಚಿಸಿರಿ. ಈ ಹೇಳಿಕೆಯನ್ನು ಕ್ರಿಸ್ತನಿಗೆ ಸಂಬಂಧಿಸಿರಿ.
8. ಎಫೆಸ 5:22-33ರ ಪ್ರಕಾರ ಗಂಡನು ತನ್ನ ಹೆಂಡತಿಯನ್ನು ಹೇಗೆ ಪ್ರೀತಿಸಬೇಕು?
9. ಕ್ರಿಸ್ತನು ತನ್ನ ಸಭೆಗೆ ಏನನ್ನು ಒದಗಿಸುವನು?
10. ಕ್ರಿಸ್ತನ ಸಭೆಗೆ ಯಾವ ರೀತಿಯ ಭವಿಷ್ಯವಿರುವುದು? ಈ ಭವಿಷ್ಯವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
11. ಸಭೆಯನ್ನು "ಕ್ರಿಸ್ತನ ಮದಲಗಿತ್ತಿ"ಯಂತೆ ನೀವು ಯೋಚಿಸುವಾಗ ಯಾವ ಮುಖ್ಯ ಗುಣಲಕ್ಷಣವು ನಿಮ್ಮ ಮನಸ್ಸಿಗೆ ಬರುವುದು?
12. ಕ್ರಿಸ್ತನು ತನ್ನ ಸಭೆಗೆ ರಕ್ಷಣೆಯನ್ನು ವಾಗ್ದಾನ ಮಾಡಿದನೋ? ಬೇರೆ ಇತರ ಸಭೆಗೆ ಆತನು ರಕ್ಷಣೆಯನ್ನು ವಾಗ್ದಾನ ಮಾಡಿರುವನೋ?

© 2009 Truth for Today